(ಗೊಂದಲ)

ಶ್ರೀ ಎನ್. ಧರ್ಮಸಿಂಗ್ : ಬಿಐಎಂಸಿ ಪ್ರಾಜೆಕ್ಟ್ ಬಗ್ಗೆ ತಾವು ಸದನದಲ್ಲಿ ಏನು ಹೇಳಿದ್ದಿರೆಂಬುದರ ಬಗ್ಗೆ ನನ್ನ ಹತ್ತಿರ ಹೇಳಿಕೆ ಇದೆ. ಅದು ಇರಲಿ.

ಅಧ್ಯಕ್ಷರು : ತಾವು ಅಂತಿಮವಾಗಿ ಹೇಳಿ. Let us close.

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ನಾವು ಎಲ್ಲರೂ ವಿರೋಧ ಪಕ್ಷದ ಸಾಲಿನಲ್ಲಿ ಕಾಂಗ್ರೆಸ್, ಸಿಪಿಎಂ, ಇಂಡಿಪೆಂಡೆನ್ಸ್ ಪಕ್ಷದವರೆಲ್ಲರೂ ಇದ್ದೇವೆ. ಮೊಟ್ಟಮೊದನೆಯದಾಗಿ ಈ ವಿಷಯದಲ್ಲಿ ಒಂದೇ ಧಾಟಿಯಲ್ಲಿ ಎಲ್ಲರೂ ಕೂಡ ಒಮ್ಮತಕ್ಕೆ ಬಂದಿದ್ದೇವೆ ಸಿಬಿಐ ಎನ್‌ಕ್ವಯರಿ ಆಗಬೇಕು. ಇವತ್ತು ಜಾಲಪ್ಪನವರ ಕೇಸ್‌ನಲ್ಲಿ ಏನಾಯಿತು? ವೀರಪ್ಪನ್ ಕೇಸ್‌ನಲ್ಲಿ ಏನಾಯಿತು ಎನ್ನುವಂಥದ್ದಲ್ಲ. ಇದು 11 ವರ್ಷಗಳ ಕಾಲವೆಂದು ನೀವೇ ಹೇಳಿದ್ದೀರಿ. ಬಿಎಂಐಸಿ ಪ್ರಾಜೆಕ್ಟ್ ಇದೊಂದು ಕರ್ಮಕಾಂಡ ಇದೆ ಏನೇನೊ ಇದೆ ಎನ್ನತಕ್ಕಂಥ ರೀತಿಯಲ್ಲಿ ನೀವೇ ಹೇಳಿದ್ದೀರಿ ನಾವು ಹೇಳುವುದಕ್ಕೆ ಹೋಗಿಲ್ಲ. ನೀವು ಹೇಳಿದ ಮೇಲೆ ನಿಮ್ಮಿಂದ ಬಹಳಷ್ಟು ಕೂಡ ನಿರೀಕ್ಷೆ ಇತ್ತು. ಇವತ್ತೂ ಕೂಡ ಈ ಜನತಾದಳ (ಎಸ್) ಕಛೇರಿಯಲ್ಲಿ ಕುಳಿತು ಮಾತನಾಡಿದಂತೆ ಮಾತನಾಡಿದಿರಿ. ನಿಮ್ಮ ಉಪ ಮುಖ್ಯಮಂತ್ರಿಗಳೂ ಕೂಡ ಇಲ್ಲ. ಕ್ಯಾಬಿನೆಟ್ ಡಿಸಿಷನ್ ಇಲ್ಲ, ಸರ್ಕಾರದ ನಿರ್ಣಯವಿಲ್ಲ. ಇವತ್ತು ನೀವು ಏನು ಹೇಳುತ್ತಿದ್ದೀರಿ, ನಾವೂ ಏನೂ ಹೇಳುತ್ತಿದ್ದೇವೆಂದರೆ, ಇದು ಸಿಬಿಐ ಎನ್‌ಕ್ವಯರಿ ಆಗಲೇಬೇಕು, ಆಗಲೇಬೇಕು, ಸಿಬಿಐದಿಂದ ಸಮಗ್ರ ತನಿಖೆಯಾಗುತ್ತದೆ. ಜನರಿಗೆ ಕೂಡ ಇದರಿಂದ ಮಾಹಿತಿ ಸಿಗುತ್ತದೆ. ಅದಕ್ಕಾಗಿ ಸಿಬಿಐ ಎನ್‌ಕ್ವೈಯರಿ ಆಗಬೇಕೆಂದು ಹೇಳುತ್ತಾ, ನಮ್ಮ ಪಕ್ಷದಿಂದ ನಾವು ಧರಣಿ ಮಾಡುತ್ತೇವೆ. ಸಿಬಿಐ ಎನ್‌ಕ್ವಯರಿ ಆಗಲೇಬೇಕು.

(ಈ ಹಂತದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಸದನ ಬಾವಿಗೆ ಬಂದು ಧರಣಿ ಪ್ರಾರಂಭಿಸಿದರು)

ಶ್ರೀ ವಾಟಾಳ್ ನಾಗರಾಜ್ : ಸಿಬಿಐ ತನಿಖೆಗೆ ಒಪ್ಪಿಸಬೇಕೆಂದು ನಾವು ಸಭಾತ್ಯಾಗ ಮಾಡುತ್ತಿದ್ದೇವೆ. (ವಾಟಾಳ್ ನಾಗರಾಜ್‌ರವರು ಈ ಹಂತದಲ್ಲಿ ಸಭಾತ್ಯಾಗ ಮಾಡಿದರು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಸಿಬಿಐ ಎನ್‌ಕ್ವಯರಿ ಆಗಬೇಕೆಂದು ನಾನು ಸಭಾತ್ಯಾಗ ಮಾಡುತ್ತೇನೆ.

(ಈ ಹಂತದಲ್ಲಿ ಶ್ರೀರಾಮರೆಡ್ಡಿಯವರು, ವಾಟಾಳ್ ನಾಗರಾಜ್, ಕೆ. ಜಯಪ್ರಕಾಶ್ ಹೆಗ್ಡೆ ಎನ್ ರಾಜೇಂದ್ರನ್ ಮತ್ತು ಶ್ರೀ ಜೆ.ಸಿ. ಮಾಧುಸ್ವಾಮಿಯವರ ನೇತೃತ್ವದ ಜನತಾದಳ (ಯು) ಪಕ್ಷದವರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು : ಸದನದ ಬಾವಿಗೆ ಏನು ಬಂದಿದ್ದೀರಿ ಕಾಂಗ್ರೆಸ್ ಪಕ್ಷದ ಸದಸ್ಯರು ಈ ರೀತಿ ನೀವು ಕಲಾಪಕ್ಕೆ ಅಡ್ಡಿಮಾಡತಕ್ಕಂಥದ್ದು ಸರಿಯಲ್ಲ. ನಿಮ್ಮ ಅಭಿಪ್ರಾಯಗಳನ್ನು ಹೇಳಿದ್ದೀರಿ. ನಿಯಮ 69ರ ಕೆಳಗಡೆ ಚರ್ಚೆಯಾಗಿದೆ. ನಿಮ್ಮ ಅಭಿಪ್ರಾಯವನ್ನು ಹೀಗೇ ಮಾಡಬೇಕೆಂದು ಏನೂ ಇಲ್ಲ. ಸದನ ನಡೆಯುವುದಕ್ಕೆ ಅವಕಾಶ ಮಾಡಿಕೊಡಿ.

(ಗೊಂದಲ)

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು ದಯಮಾಡಿ ತಮ್ಮ ಸ್ಥಾನಕ್ಕೆ ಹೋಗಿ. ಇವತ್ತು ಇನ್ನೂ ಕಲಾಪ ನಡೆಸುವುದಿದೆ. ಕ್ವೊಶ್ಚನ್ ಅವರ್ ಆಗುವುದಿದೆ. ಕಲಾಪಕ್ಕೆ ಅಡ್ಡಿ ಮಾಡುವುದು ಸರಿಯಲ್ಲ. ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಸಾಯಂಕಾಲ 6 ಗಂಟೆ 23 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ: 7-7-2006ರಂದು ಬೆಳಿಗ್ಗೆ: 10.00 ಗಂಟೆಗೆ ಸಮಾವೇಶಗೊಳ್ಳಲು ನಿಃಶ್ಚಯಿಸಿತು)